ಸರಬರಾಜು ಯೋಜನೆಗೆ ಸಲ್ಲಿಸಬೇಕಾದ ಹತ್ತು ಪರ್ಸೆಂಟ್ ವಂತಿಗೆ ಎಂದು ಇದನ್ನು ಪರಿಗಣಿಸಬೇಕಾಗು ತ ದೆ. ಇದರ ಜೊತೆಗೆ ಹಿಂದೆ ಮಾಡಿದ್ದ ಸುಮಾರು ೯ ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ಇತ್ತೀಚೆಗೆ ೫–೬ ಲಕ್ಷಕ್ಕೆ ಕಡಮೆಯಾಗಿದೆ ಎಂದು ನನಗೆ ತೀರ್ಮಾನ ಬಂದಿದೆ. ಆದುದರಿಂದ, ಸರ್ಕಾರದವರೇ ಜಾಗ್ರತೆಯಾಗಿ ಇದನ್ನು ಪರಿಶೀಲಿಸಿಕೊಂಡು ಮಾಡಬೇಕೆಂದು ಹೇಳುತ್ತೇನೆ.

" ಪುರಸಭೆಯಿಂದ ಇನ್ನೂ ದಾಖಲಾತಿಗಳು ಬಂದಿಲ್ಲ " ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಪುರಸಭೆ ಆಡಳಿತಾಧಿಕಾರಿಯವರ ವಶದಲ್ಲಿದ್ದು, ಗುಡಿಬಂಡೆ ತಾಲ್ಲೂಕಿನ ತಹಶೀಲ್ದಾರರೇ ಅದರ ಆಡಳಿತಾಧಿಕಾರಿಗಳಾಗಿದ್ದಾರೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅವರು ಇನ್ನೂ ಏತಕ್ಕೆ ಕಳುಹಿಸಿಲ್ಲವೆಂದು ಸರ್ಕಾರ ಕೇಳಬಹುದು, ದಾಖಲೆಗಳನ್ನು ಬೇಗ ಕಳುಹಿಸಿರೆಂದು ಅವರಿಗೆ ಸೂಚನೆ ಕೊಡಬಹುದು.

ಶ್ರೀ ಧರ್ಮಸಿಂಗ್.—ಗುಡಿಬಂಡೆ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಳೆದ ಏಳೆಂಟು ವರ್ಷಗಳಿಂದ ಇದೆ. ಈ ಪ್ರದೇಶವು ಕಲ್ಲುಬಂಡೆಗಳಿಂದ ಕೂಡಿರುವುದರಿಂದ ಸಮಸ್ಯೆ ಬಗೆಹರಿಸುವುದು ಸ್ವಲ್ಪ ಕಷ್ಟವಾಗಿದೆ. ಆದರೂ ಕೂಡ ತಜ್ಞರು ಇದನ್ನು ನಿವಾರಣೆ ಮಾಡುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಹರಿಜನ ಕಾಲೋನಿಗೆ ನೀರನ್ನು ಒದಗಿಸಲು ೯೦ ಸಾವಿರ ರೂಪಾಯಿಗಳ ಯೋಜನೆ ಮಂಜೂರಾಗಿದ್ದು, ಅದರ ಕೆಲಸ ಕೂಡ ಪ್ರಾರಂಭವಾಗಿದೆ. ಅಲ್ಲದೆ, ಸುಮಾರು ಹತ್ತು ಲಕ್ಷ ರೂಪಾಯಿಗಳ ಯೋಜನೆ ಯೊಂದನ್ನು ತೆಗೆದುಕೊಂಡಿದ್ದು ಅದಕ್ಕೆ ಆಡಳಿತಾಧಿಕಾರಿಯವರು ನಿರ್ಣಯ ಮಾಡಿ ಕಳುಹಿಸಬೇಕಾಗಿದೆ. ನಿರ್ಣಯ ಸರ್ಕಾರಕ್ಕಿನ್ನೂ ಬಂದಿಲ್ಲ. ಆಡಳಿತಾಧಿಕಾರಿಯವರು ಏತಕ್ಕೆ ನಿರ್ಣಯವನ್ನು ಕಳುಹಿಸಿಲ್ಲವೆಂದು ವಿಚಾರಿಸಲು ಸೂಚನೆ ನೀಡಿದ್ದೇನೆ. ಅಲ್ಲದೆ, ಜಲಮಂಡಳಿಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರಿಗೆ, ಯೋಜನೆಯನ್ನು ತೀವ್ರ ಗತಿಯಲ್ಲಿ ಮುಗಿಸಿ, ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದೇನೆ.

PRESENTATION OF PETITIONS

SRI H. GANGADHARAN.—Sir. I present the following petitions.

1. Petition signed by Sri M. H. Ramanna and others regarding amalgamation of Sri Anjaneya Swamy Co-operative Society with Lingadahalli Agriculture Co-operative Society.

2. Petition signed by the General Secretary and others of Mysore Taluk, regarding remission of loan advance on digging of wells in case of failure of water.

MR. SPEAKER.—The petitions stand referred to the Committee on petitions.

SRI PRABHAKAR TELKAR.—Sri, I present the petition regarding regularisation of unauthorised cultivation of forest land by Lambani Community in Chittapur Taluk.

MR SPEAKAR.—The Petition stands referred to the Committee on petitions.

SMT ANASUYA GAJANANA SHARMA.—Sir, I present the following petitions.

1. Petition signed by public of Sirsi Taluk regarding running of a bus to Ankanakatte, Sirsi Taluk.

2. Petition signed by the Chairman, School Development Committee, Sevakar of Ankola Taluk regarding construction of a bridge at Pansaguli in Yellapur, Ankola Taluk.

3. Petition signed by the villagers of Kallagara regarding construction of a bridge at Kallagara on Thankal road.

4. Petition signed by the villagers of Sharagani regading providing of a polling booth at Shiragani in Sirsi Taluk.

5. Petition Signed by the villagers of Shiragani regarding construction of a road between Shiragari and Mathegatta at Sirsi Taluk.

6. Petition signed by several villagers of Karwar Taluk regarding delay in the repairs of Malavalli Road, Yellapura Taluk. Karwar District,

MR. SPEAKER.—The petitions stand referred to the Committee on Petitions.

DISCUSSION FOR SHORT DURATION UNDER RULE 59

re. Grave Situation arising as a result of heavy floods and sea erosion in the state.

SRI P. N. REDDY.—I raise a point of order Sir. The matter that is proposed to be raised pertains to the discussion on the grave situation arising as a result of heavy floods and sea eros on in the State. ಇದು ಇಡೀ ರಾಜ್ಯಕ್ಕೇ ಅನ್ವಯಿಸುವ ಹಾಗೆ ಕಾಣುತ್ತಿದೆ. ಆದರೆ, ಕೋಲಾರ ಮತ್ತಿತರ ಕಡೆಗಳಲ್ಲಿ ಮಳೆ ಬಿದ್ದಿಲ್ಲ ಮತ್ತು ಕುಡಿಯುವುದಕ್ಕೂ ನೀರಿಲ್ಲ. ಆದುದರಿಂದ, "ರಾಜ್ಯ" ಎನ್ನುವ ಪದದ ಬದಲು ಭೀಕರ ಮಳೆ ಮತ್ತು ಸಮುದ್ರದ ಉಬ್ಬರದಿಂದಾಗಿ ತೊಂದರೆಗೀಡಾಗಿರುವ ಪ್ರದೇಶಗಳನ್ನು ಸೇರಿಸಬೇಕೆಂದು ಹೇಳುತ್ತೇನೆ. We should have accepted under rule 59. the matter proposed to be raised by Mr. S. R. Bommai. The rule either should be amended or they should only pertains to the areas of North Kanara. South Kanara and Dharwar Districts.

ಶ್ರೀ ಭಾಸ್ಕರಶೆಟ್ಟಿ.—ಮಾನ್ಯ ರೆಡ್ಡಿಯವರಿಗೆ ಸಮುದ್ರದ ಉಬ್ಬರದ ಪರಿಣಾಮವು ಗೋತ್ತಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ರಾಜ್ಯದ ನಾನಾ ಕಡೆಗಳಲ್ಲಿ ಪ್ರವಾಹದ ಹಾವಳಿ ಮತ್ತು ಸಮುದ್ರದ ಕೊರೆತದಿಂದಾಗಿರುವ ಅನಾಹುತಗಳ ಬಗ್ಗೆ ಚರ್ಚೆ ಮಾಡಲು ಅನೇಕ ಮಾನ್ಯ ಸದಸ್ಯರುಗಳು ಕಳಕಳಿ ವ್ಯಕ್ತಪಡಿಸಿದರು. ಆದುದರಿಂದ, ಅನೇಕರು ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ದೊರಕಲಿ ಎನ್ನುವ ದೃಷ್ಟಿಯಿಂದ ಕಾರ್ಯಕ್ರಮದ ಪಟ್ಟಿಯಲ್ಲಿ ಅದನ್ನು ಸೇರಿಸಲಾಗಿದೆ. ಈ ಕಾರಣ, ನಿಮ್ಮ ಕ್ರಿಯಾಲೋಪ ನಿಲ್ಲುವುದಿಲ್ಲ.